ಕ್ರ.ಸಂ: 19

ಕರ್ನಾಟಕ ಸರ್ಕಾರ

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**

ದೂರವಾಣಿ ಸಂಖ್ಯೆ:080-26644312/14/15, ಫ್ಯಾಕ್ಸ್ ನಂ.22453646, ಇ-ಮೇಲ್: karbuildworkerswelfare@gmail.com

ಸಂ: ಸಿಡಬ್ಲ್ಯೂಬಿ/ಕೆಎಸ್/ಸಿಆರ್-01/2016-17

ಕಾರ್ಯದರ್ಶಿಯವರ ಕಛೇರಿ
ಕಲ್ಯಾಣ ಸುರಕ್ಷಾ ಭವನ
ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ
ಬೆಂಗಳೂರು-560029.
ದಿನಾಂಕ: 21-03-2017

## ಸುತ್ತೋಲೆ

ವಿಷಯ: ಕ್ಷೇತ್ರ ಕಛೇರಿಗಳಲ್ಲಿ ಕಟ್ಟಡ ಮತ್ತು ಇತರೇ ನಿರ್ಮಾಣ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996 ರನ್ವಯ ನೋಂದಣಿ/ಸೌಲಭ್ಯ ಅರ್ಜಿಗಳನ್ನು ತಂತ್ರಾಂಶಕ್ಕೆ ಅಳವಡಿಸುವ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಲು ಹಾಗೂ ಅವುಗಳನ್ನು ಸಕಾಲ ತಂತ್ರಾಂಶದಲ್ಲಿ ಭರ್ತಿ ಮಾಡಲು ಸುವ್ಯಸ್ಥಿತ ಅಂತರ್ಜಾಲ ವ್ಯವಸ್ಥೆ ಒದಗಿಸುವ ಬಗ್ಗೆ.

ಉಲ್ಲೇಖ: 1) ಮಂಡಳಿಯ ಇ-ಮೇಲ್ ಪತ್ರ ದಿನಾಂಕ: 10-02-2017
2) ಮಂಡಳಿಯ ನೆನಪೋಲೆ ಪತ್ರ ಸಂಖ್ಯೆ: ಕಕಾಮಂ/ಪರಿಕರ/ಸಿಆರ್-01/2016-17 ದಿನಾಂಕ: 13-03-2017

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಟ್ಟಡ ಮತ್ತು ಇತರೇ ನಿರ್ಮಾಣ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳು) ಕಾಯ್ದೆ 1996ರ ಅಡಿಯಲ್ಲಿ ಕಟ್ಟಡ ಹಾಗೂ ನಿರ್ಮಾಣ ಕಾರ್ಮಿಕರ ನೋಂದಣಿ ಅರ್ಜಿಗಳನ್ನು ಅಂತರ್ಜಾಲ ಮೂಲಕ ಭರ್ತಿಮಾಡಿ ವಿಲೇವಾರಿ ಮಾಡುವಂತೆ ಅನುಕೂಲವಾಗಲು ಈಗಾಗಲೇ ಹಿರಿಯ/ಕಾರ್ಮಿಕ ನಿರೀಕ್ಷಕರ ಹಂತದಲ್ಲಿ ಒಟ್ಟು 230 ಕಛೇರಿಗಳ ಪೈಕಿ ಒಟ್ಟು 49 ಎಂಟಿಎಸ್ ಡಾಟಾ ಕಾರ್ಡಗಳನ್ನು ಮಂಡಳಿಯ ವತಿಯಿಂದ ಖರೀದಿ ಮಾಡಿ ಬೆಂಗಳೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರಿಯ ಕಾರ್ಮಿಕ ನಿರೀಕ್ಷಕರುಗಳಿಗೆ ಒದಗಿಸಲಾಗಿದೆ. ಇನ್ನು ಏಳು (7) ಹಿರಿಯ/ಕಾರ್ಮಿಕ ನಿರೀಕ್ಷಕರುಗಳು ಎಂಟಿಎಸ್ ಡಾಟಾ ಕಾರ್ಡಗಳನ್ನು ತಮ್ಮ ಹಂತದಲ್ಲೇ ಖರೀದಿಸಿ ಬಿಲ್ಲಗಳನ್ನು ಪಾವತಿಸಲು ಮಂಡಳಿಗೆ ಸಲ್ಲಿಸುತ್ತಿರುತ್ತಾರೆ.

ಇದಲ್ಲದೆ, ರಾಜ್ಯದ ಇತರೆ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸುಮಾರು 57 ಹಿರಿಯ/ಕಾರ್ಮಿಕ ನಿರೀಕ್ಷಕರ ಕಛೇರಿಗಳಲ್ಲಿ BSNL Broadband ಸೌಲಭ್ಯ ಒದಗಿಸಿ ಮಂಡಳಿಯ ವತಿಯಿಂದ ಬಿಲ್ ಪಾವತಿಸಲಾಗುತ್ತಿದೆ. ಆದರೆ, ಕೆಲವು ಹಿರಿಯ/ಕಾರ್ಮಿಕ ನಿರೀಕ್ಷಕರುಗಳು ತಮ್ಮ ಬಿಲ್ಲ್ ಮೊತ್ತವನ್ನು ಸರಿಯಾದ ಸಮಯಕ್ಕೆ ಹಣ ಪಾವತಿ ಆಗುತ್ತಿಲ್ಲ ಎನ್ನುವ ಕಾರಣಕ್ಕೆ ಆಗಾಗ ಅಂತರ್ಜಾಲ ಸ್ಥಗಿತ ಆಗುತ್ತಿರುತ್ತದೆ ಎಂದು ಮಂಡಳಿಯ ಗಮನಕ್ಕೆ ತಂದಿರುತ್ತಾರೆ. ಇನ್ನು ಕೆಲವು ಹಿರಿಯ/ಕಾರ್ಮಿಕ ನಿರೀಕ್ಷಕರ ಹಾಗೂ ಕಾರ್ಮಿಕ ಅಧಿಕಾರಿಗಳ, ಸಹಾಯಕ ಕಾರ್ಮಿಕ ಆಯುಕ್ತರ ಕಛೇರಿಗಳಲ್ಲಿ ಅಂತರ್ಜಾಲ ವ್ಯವಸ್ಥೆಯನ್ನು ಕಾರ್ಮಿಕ ಇಲಾಖೆಯ ವತಿಯಿಂದ ಒದಗಿಸಿದಿದ್ದರೂ ಸಹ ಅದರ ಬಿಲ್ ಪಾವತಿ ಸರಿಯಾದ ಸಮಯಕ್ಕೆ ಆಗುತ್ತಿಲ್ಲವಾದ್ದರಿಂದ ಅಂತರ್ಜಾಲ ವ್ಯವಸ್ಥೆ ಸ್ಥಗಿತ ಆಗಾಗ ಆಗುತ್ತಿದ್ದು ಮಂಡಳಿಯ ಕಾರ್ಯವನ್ನು ಸಮರ್ಪಕವಾಗಿ ನಡೆಸಲು ತೊಂದರೆ ಆಗುತ್ತಿದೆ ಹಾಗೂ ಇನ್ನು ಕೆಲವು ಹಿರಿಯ/ಕಾರ್ಮಿಕ ನಿರೀಕ್ಷಕರುಗಳು ತಮ್ಮ ಕಛೇರಿಯಲ್ಲಿ ಅಂತರ್ಜಾಲ ಸೌಲಭ್ಯವಿಲ್ಲವೆಂಬ ವಿಷಯವನ್ನು ಮಂಡಳಿಯ ಕಛೇರಿಯ ಗಮನಕ್ಕೆ ತಂದಿರುತ್ತಾರೆ. ಈ ಕಾರಣಗಳಿಂದಾಗಿ ಕ್ಷೇತ್ರ ಕಛೇರಿ ಮಟ್ಟದಲ್ಲಿ ನೋಂದಣಿ ಅರ್ಜಿಗಳು ಅಂತರ್ಜಾಲದಲ್ಲಾಗಲು ತೊಂದರೆ ಆಗುತ್ತಿರುವುದು ಹಾಗೂ ಬಹಳಷ್ಟು ಕ್ಷೇತ್ರ ಕಛೇರಿಗಳಿಂದ ಪ್ರಗತಿ ವರದಿ ಬರುತ್ತಿಲ್ಲವೆಂದು ಕಂಡು ಬಂದಿದೆ. ಈ ಸಮಸ್ಯೆಯನ್ನು ಮಂಡಳಿಯಿಂದ ಕೂಡಲೇ ಬಗೆ ಹರಿಸುವುದು ಅವಶ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಸಹಾಯಕ ಕಾರ್ಮಿಕ ಆಯುಕ್ತರು, ಕಾರ್ಮಿಕ ಅಧಿಕಾರಿ, ಹಿರಿಯ/ಕಾರ್ಮಿಕ ನಿರೀಕ್ಷಕರ ಕಛೇರಿಗಳಲ್ಲಿ ಮಂಡಳಿಯ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಬೇಕಾಗಿರುವ ಮೂಲಭೂತ ಸೌಲಭ್ಯಗಳ ವಿವರಗಳನ್ನು ಮಂಡಳಿಗೆ ಕಳುಹಿಸಲು ಈಗಾಗಲೇ ಉಲ್ಲೇಖ (1)ರ ಇ-ಮೇಲ್‌ನಲ್ಲಿ ಹಾಗೂ ಉಲ್ಲೇಖ (2)ರ ಪತ್ರದಲ್ಲಿ ಕೇಳಲಾಗಿರುತ್ತದೆ.

ಸಹಾಯಕ ಕಾರ್ಮಿಕ ಆಯುಕ್ತರು, ಕಾರ್ಮಿಕ ಅಧಿಕಾರಿ, ಹಿರಿಯ/ಕಾರ್ಮಿಕ ನಿರೀಕ್ಷಕರ ಕಛೇರಿಗಳಲ್ಲಿ ಫಲಾನುಭವಿಗಳ ನೊಂದಣಿ ಹಾಗೂ ಕ್ಲೇಮ್ ಅರ್ಜಿಗಳನ್ನು ಅಂತರ್ಜಾಲ ಮೂಲಕ ನಿಗದಿತ ತಂತ್ರಾಂಶಗಳಲ್ಲಿ ಭರ್ತಿ ಮಾಡಲು ಹಾಗೂ ಪ್ರಗತಿ ವರದಿಗಳನ್ನು ಸಕಾಲದಲ್ಲಿ ಮಂಡಳಿಗೆ ಸಲ್ಲಿಸಲು ಅನುಕೂಲವಾಗಲು BSNL ಅಥವಾ ಆಯಾ ಸ್ಥಳಕ್ಕೆ ಅನುಕೂಲವಾಗುಂತಹ ಇತರೆ ಅಂತರ್ಜಾಲ ಸೇವಾದಾರರಿಂದ ಅಂತರ್ಜಾಲ ಸಂಪರ್ಕ ಪಡೆದುಕೊಳ್ಳಲು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುಮತಿ ನೀಡಿದೆ:-

1. ಕಛೇರಿಯಲ್ಲಿ ಕಾರ್ಮಿಕ ಇಲಾಖೆಯಿಂದ ಈಗಾಗಲೇ ಅಂತರ್ಜಾಲ ಸೌಲಭ್ಯ ಒದಗಿಸಿದ್ದಲ್ಲಿ, ಮತ್ತೊಮ್ಮೆ ಮಂಡಳಿಯಿಂದ ಪ್ರತ್ಯೇಕವಾಗಿ ಅಂತರ್ಜಾಲ ವ್ಯವಸ್ಥೆ ಪಡೆಯುವಂತಿಲ್ಲ. ಆದರೆ ಕಾರ್ಮಿಕ ಇಲಾಖೆಯಿಂದ ಅಂತರ್ಜಾಲ ವ್ಯವಸ್ಥೆಯನ್ನು ಈಗಾಗಲೇ ಒದಗಿಸಿದ್ದಲ್ಲಿ, ಬಿಲ್ ಪಾವತಿಗೆ ಅನುದಾನ ಕೊರತೆ ಇದ್ದಲ್ಲಿ ದೂರವಾಣಿ ಕರೆದರ ಹೊರತುಪಡಿಸಿ ಬಿಲ್‌ನ ಅಂತರ್ಜಾಲ ಭಾಗಕ್ಕೆ (Internet Component) ಮಾತ್ರ ಸಂಬಂಧಿಸಿ ಪ್ರತಿ ಮಾಹೆಯಲ್ಲಿ ರೂ.1,100/- ಕ್ಕೆ ಅಥವಾ ಬಿಲ್‌ನ (ಇವುಗಳಲ್ಲಿ ಯಾವುದು ಕಡಿಮೆಯಿದ್ದಲ್ಲಿ) ಮೊತ್ತವನ್ನು ಮಂಡಳಿಯಿಂದ ಪಡೆದ ಮುಂಗಡ ಹಣ (Impressed Amount)ದಿಂದ ಖರ್ಚು ವಹಿಸಬಹುದಾಗಿದೆ. ಈ ಮೊತ್ತವನ್ನು ಮಂಡಳಿಯಿಂದ ಪಾವತಿಸಿದರೂ ಸಹ ಅಂತರ್ಜಾಲ ವ್ಯವಸ್ಥೆ ಚಾಲ್ತಿಯಲ್ಲಿ ಬರದೇ ಇದ್ದಲ್ಲಿ ಮಂಡಳಿಯ ಮುಂಗಡ ಹಣವನ್ನು ಬಿಲ್ ಪಾವತಿಗಾಗಿ ಖರ್ಚು ಮಾಡಬಾರದೆಂದು ಸೂಚಿಸಿದೆ.
2. BSNL ಅಥವಾ ಸ್ಥಳೀಯವಾಗಿ ಸಿಗುವಂತಹ ಇತರೆ ಅಂತರ್ಜಾಲ ಸೇವಾದಾರರಿಂದ ಡಾಟಾ ಕಾರ್ಡಗೆ ಮಾಹೆಗೆ ರೂ.1,100/-ರ ಮಿತಿಗಳಿಗೆ ಒಳಪಟ್ಟು (Unlimited usage fixed charges) ಕಛೇರಿಗೆ ಹೊಸ ಅಂತರ್ಜಾಲ ವ್ಯವಸ್ಥೆ ಅಳವಡಿಸಿಕೊಳ್ಳಬಹುದಾಗಿದೆ.
3. ಕಛೇರಿಗೆ ಹೊಸ ಅಂತರ್ಜಾಲ ವ್ಯವಸ್ಥೆ ಅಳವಡಿಸಿಕೊಳ್ಳಬೇಕಾದಲ್ಲಿ ಸಂಬಂಧಿಸದ ಕಛೇರಿಯ ಹೆಸರಿನಲ್ಲಿ /ಪದನಾಮದಲ್ಲಿ ಮಾತ್ರ ಪಡೆಯತಕ್ಕದ್ದು, ವ್ಯಕ್ತಿಗತ ಹೆಸರಿನಲ್ಲಿ ಅಂತರ್ಜಾಲ ವ್ಯವಸ್ಥೆಯನ್ನು ಪಡೆಯಲು ಅವಕಾಶ ಇರುವುದಿಲ್ಲ.
4. ಈ ವ್ಯವಸ್ಥೆಯು ಅಂತರ್ಜಾಲ ಸೇವೆಗೆ ಮಾತ್ರ ಸೀಮಿತಗೊಳಪಟ್ಟಿದೆ ದೂರವಾಣಿ ಕರೆದರ (Call Charge) ಕ್ಕೆ ಸಂಬಂದಿಸಿರುವುದಿಲ್ಲ.
5. ಮಂಡಳಿಯವತಿಯಿಂದ ನೀಡಿದ ಡೇಟಾ ಕಾರ್ಡನ್ನು ಪಡೆಯುವ ಅಧಿಕಾರಿ ಅಥವಾ ಅವರಿಂದ ಪ್ರಾಧೀಕೃತ ಡೇಟಾ ಎಂಟ್ರಿ ಆಪರೇಟರ್‌ಗಳು ಅದರ ಪೂರ್ಣ ಸುರಕ್ಷತೆ ಹಾಗೂ ಡಾಟಾ ಬಳಕೆಯ (Data usage) ಜವಾಬ್ದಾರರಾಗಿರುತ್ತಾರೆ.

ತಮ್ಮ ನಂಬುಗೆಯ,

21/03/17

ಕಾರ್ಯದರ್ಶಿಗಳು

ಗೆ,

1. ಎಲ್ಲಾ ಸಹಾಯಕ ಕಾರ್ಮಿಕ ಆಯುಕ್ತರುಗಳಿಗೆ
2. ಎಲ್ಲಾ ಕಾರ್ಮಿಕ ಅಧಿಕಾರಿಗಳಿಗೆ
3. ಎಲ್ಲಾ ಹಿರಿಯ/ ಕಾರ್ಮಿಕ ನಿರಿಕ್ಷಕರುಗಳಿಗೆ